**2 ನೇ ಅಪರ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಮದ್ದೂರು**
**ಸಿ.ಸಿ. 1420/2020**

**ಫಿರ್ಯಾಧಿದಾರರುಃ ಮದ್ದೂರು ಪೊಲೀಸ್ ಠಾಣೆ**

**-ವಿರುದ್ಧ-**

**ಆರೋಪಿತರುಃ -**

1. ಲೋಕೇಶ್ ಸಿ ಎನ್ ಉಃ ಲೋಕಿ ಬಿನ್ ಲೇ.ನರಸಿಂಹಯ್ಯ, 35 ವರ್ಷ, **(ಇವರನ್ನು ಈ ಪ್ರಕರಣದಿಂದ ಪ್ರತ್ಯೇಕಿಸಲಾಗಿದೆ)**

2. ಸಂತೋಷ ಚಾಬ್ರಿಯಾ ಬಿನ್ ಮುರಳಿ, 34 ವರ್ಷ, ಅಕೌಂಟ್ ಆಫೀಸರ್, ಪತಂಜಲಿ ಆಯುರ್ವೇದ ಲಿಮಿಟೆಡ್, ಮಂಡ್ಯ.

3. ಶಿವಕುಮಾರ್ ಜಿ ಬಿನ್ ಗೋಪಾಲಪ್ಪ ಜಿ, 41 ವರ್ಷ, **(ಇವರನ್ನು ಈ ಪ್ರಕರಣದಿಂದ ಪ್ರತ್ಯೇಕಿಸಲಾಗಿದೆ)**

4. ಗಿರೀಶ್ ಎಂ ಸಿ ಬಿನ್ ಚಂದ್ರಪ್ಪ, 31 ವರ್ಷ, **(ಇವರನ್ನು ಈ ಪ್ರಕರಣದಿಂದ ಪ್ರತ್ಯೇಕಿಸಲಾಗಿದೆ)**

5. ಭರತರಾಜ್ ಆರ್ ಬಿನ್ ಲೇ.ರಾಜಕುಮಾರ್ ಎಸ್, **(ಮೃತಪಟ್ಟಿದ್ದಾರೆ)**

**-ಃ ದೋಷಾರೋಪಣೆಃ-**

ಶ್ರೀ. **ಕೋನಪ್ಪ ಎನ್ ವಿ.,** ಬಿ.ಎ.ಎಲ್, ಎಲ್.ಎಲ್.ಬಿ., 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು, ಮದ್ದೂರು ಆದ ನಾನು ಈ ಮೇಲ್ಕಂಡ ನಿಮ್ಮನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ :

ದಿನಾಂಕಃ 07/12/2016 ರಂದು ಮಧ್ಯಾಹ್ನ ಸುಮಾರು 3-00 ಗಂಟೆ ಸಮಯದಲಿ ಮದ್ದೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ಟೌನ್ ನಲ್ಲಿರುವ ಚಾಸಾ.1 ರವರ ಬಾಬ್ತು ನಂದಿ ಸ್ಟೀಲ್ ಅಂಡ್ ಸಿಮೆಂಟ್ ಅಂಗಡಿಯ ಬಳಿಗೆ 2 ನೇ ಆರೋಪಿಯಾದ ನೀನು 1 ಮತ್ತು 4 ನೇ ಆರೋಪಿತರ ಜೊತೆ ಕಾರಿನಲ್ಲಿ ಹೋಗಿದ್ದು, 1 ಮತ್ತು 4 ನೇ ಆರೋಪಿತರು ಕಾರಿನಿಂದ ಕೆಳಗೆ ಇಳಿದು ಅಂಗಡಿಯಲ್ಲಿದ್ದ ಚಾಸಾ.1 ರವರ ಬಳಿ ಹೋಗಿ 1 ನೇ ಆರೋಪಿಯು ತನ್ನ ಹೆಸರು ಸುಭಾಷ ಪತಂಜಲಿ ಕಂಪನಿಯಲ್ಲಿ ಪ್ರಾಜೆಕ್ಟ್ ಇಂಜಿನಿಯರ್ ಹಾಗೂ 4 ನೇ ಆರೋಪಿಯು ತನ್ನ ಹೆಸರು ರಾಜೇಶ್ ಪತಂಜಲಿ ಕಂಪನಿಯಲಿ ಅಕೌಂಟ್ ಆಫೀಸರ ಆಗಿರುತ್ತೇವೆ ಎಂದು ಪರಿಚಯಿಸಿಕೊಂಡು

ಕಂಪನಿಗೆ ಕಬ್ಬಿಣದ ಅವಶ್ಯಕತೆ ಇದೆ ಎಂದು ತಿಳಿಸಿ ಬೆಲೆಯನ್ನು ವಿಚಾರ ಮಾಡಿಕೊಂಡು ಹೋಗಿದ್ದು, ದಿನಾಂಕಃ 10/12/2016 ರಂದು ಮಧ್ಯಾಹ್ನ 2-00 ಗಂಟೆಗೆ 1 ಮತ್ತು 2 ನೇ ಆರೋಪಿತರು ಚಾಸಾ.1 ರವರ ಬಳಿ ಹೋಗಿ 100 ರಿಂದ 150 ಟನ್ ಕಬ್ಬಿಣ ಹಾಗೂ ಬೈಡಿಂಗ್ ವೈರ್ ಬೇಕೆಂದು ಭಾನುವಾರ ಬರುವುದಾಗಿ ಹೋಗಿ, ದಿನಾಂಕಃ 11/12/2016 ರ ಭಾನುವಾರ ಬೆಳಗಿನ ಸಮಯದಲ್ಲಿ 2 ನೇ ಆರೋಪಿಯಾದ ನೀನು ಉಳಿದ ಆರೋಪಿತರ ಜೊತೆ ಸೇರಿಕೊಂಡು ಕೆಎ-01 ಎಇ-1281 ಹಾಗೂ ಎಪಿ-09 ಟಿಎ-0078 ಬಾಡಿಗೆ ಲಾರಿಗಳಲ್ಲಿ ಬಂದು ಸುಮಾರು 47 ಟನ್ ಕಬ್ಬಿಣವನ್ನು ತುಂಬಿಸಿಕೊಂಡು ಪತಂಜಲಿ ಕಂಪನಿಯ ಹೆಸರಿನಲ್ಲಿ 25 ಲಕ್ಷ ರೂಪಾಯಿಯ ಚೆಕ್ ನ್ನು ನಿಜವಾದ ಬ್ಯಾಂಕ್ ಚೆಕ್ ಎಂದು ಚಾಸಾ.1 ರವರಿಗೆ ನಂಬಿಸಿ ಮೋಸದಿಂದ ನಕಲಿ ಬ್ಯಾಂಕ್ ಚೆಕ್ ನ್ನು ಚಾಸಾ.1 ರವರಿಗೆ ನೀಡಿದ್ದು, ನಂತರ ದಿನಾಂಕಃ 13/12/2016 ರಂದು 1 ನೇ ಆರೋಪಿಯು ಮತ್ತೆ 23 ಟನ್ ಕಬ್ಬಿಣವನ್ನು ಕೆಎ-01 ಎಇ-1281 ಲಾರಿಯಲ್ಲಿ ತುಂಬಿಕೊಂಡು ಹೋಗಿ 5 ನೇ ಆರೋಪಿಯ ಸಹಾಯದಿಂದ ಬೇರೆ ಕಡೆ ಮಾರಾಟ ಮಾಡಿದ್ದು 2 ನೇ ಆರೋಪಿಯಾದ ನೀನು ಉಳಿದ ಆರೋಪಿತರ ಜೊತೆ ಸೇರಿಕೊಂಡು  ಮೋಸದಿಂದ ಮತ್ತು ಅಪ್ರಾಮಾಣಿಕತೆಯಿಂದ ಚಾಸಾ.1 ರವರಿಗೆ ಮೋಸ ಮಾಡಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 468, 471, 420 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ದೋಷಾರೋಪಿಸುತ್ತೇನೆ.

ಪ್ರಶ್ನೆಃ1. ಈ ಮೇಲೆ ಹೇಳಿ, ನಿಮಗೆ ವಿವರಿಸಲಾದ, ಈ ದೋಷಾರೋಪಣೆ ಅರ್ಥವಾಯಿತಾ?

ಉತ್ತರಃ

ಪ್ರಶ್ನೆಃ2. ಈ ಮೇಲೆ ಹೇಳಿದ ದೋಷಾರೋಪಣೆ ಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ

*(ಈ ಮೇಲೆ ಹೇಳಿದ ದೋಷಾರೋಪಣೆಯನ್ನು ಆರೋಪಿತರಿಗೆ ಅವರಿಗೆ ತಿಳಿಯುವಂತಹ ಕನ್ನಡ ಭಾಷೆಯಲ್ಲಿ ಓದಿ, ವಿವರಿಸಿ ಹೇಳಿ, ಅವರು ಕೊಟ್ಟಂತಹ ಉತ್ತರವನ್ನು ಅವರ ಭಾಷೆಯಲ್ಲಿಯೇ ಯಥವತ್ತಾಗಿ ನನ್ನ ಕೈ ಬರಹದಲ್ಲಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದೇನೆ.)*

(ಶ್ರೀ ಕೋನಪ್ಪ ಎನ್ ವಿ)

ದಿನಾಂಕಃ 07-06-2024 2 ನೇ ಅಪರ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ ಮದ್ದೂರು.